**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 230/2021**

**ಚಾ.ಸಾ.** 4

**ಪ್ರಾ.ಸಾ.** 4

**ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಗುರುನಾಥ ಹೆಬ್ಬಳ್ಳಿ |
| ತಂದೆಃ ಗಂಡನ ಹೆಸರು | ಹಟೆಲಪ್ಪ ಹೆಬ್ಬಳ್ಳಿ |
| ಉದ್ಯೋಗ | ಎ ಎಸ್ ಐ ಅಳ್ನಾವರ ಪೊಲೀಸ ಠಾಣೆ |
| ವಯಸ್ಸು | 56 ವರ್ಷ |
| ವಾಸಸ್ಥಳ | ಅಳ್ನಾವರ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

2017 ರಿಂದ 2021 ರವರೆಗೆ ನಾನು ಕಲಘಟಗಿಯ ಪೊಲೀಸ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02.04.2020 ರಂದು ಸರಕಾರಿ ಹೈವೆ ಪೆಟ್ರೋಲಿಂಗ್ ವಾಹನದಲ್ಲಿ ಚಾಸಾ-1, ಚಾಸಾ-5 ಮತ್ತು ನಾನು ಸೇರಿ ಸಂಜೆ 6.30 ಸುಮಾರಿಗೆ ಕಲಘಟಗಿಯಿಂದ ಹಿರೇಹೊನ್ನಿಹಳ್ಳಿ ದಾರಿಯಲ್ಲಿ ಪೆಟ್ರೋಲಿಂಗ್ ಶುರು ಮಾಡಿದ್ದು ಮರು ದಿನ ಬೆಳಿಗ್ಗೆ 7.00 ಗಂಟೆಗೆ ಸುಮಾರಿಗೆ ಚಾಸಾ-1 ರವರಿಗೆ ಒಂದು ಫೋನ್ ಕರೆ ಬಂದಿದ್ದು, ಸದರಿ ಕರೆಯಲ್ಲಿ ಬಿ. ಗುಡಿಹಾಳ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಯಾರೋ ಇಬ್ಬರು ಸ್ಪಿರಿಟ್ ಮಾರಾಟ ಮಾಡುತ್ತಿರುವ ವಿಷಯ ನಮಗೆ ತಿಳಿಸಿ, ಠಾಣೆಯಲ್ಲಿದ್ದ ಚಾಸಾ-9 ರವರಿಗೆ ಸದರಿ ವಿಷಯವನ್ನು ಫೋನ್ ಕರೆ ಮುಖಾಂತರ ತಿಳಿಸಿ ಅವರ ಮಾರ್ಗದರ್ಶನದಂತೆ ಹಿರೆಹೊನ್ನಿಹಳ್ಳಿ ಗ್ರಾಮದ ಹತ್ತಿರ ಬಂದಾಗ ಬಸ್ಸ ನಿಲ್ದಾಣದಲ್ಲಿ ವಾಹನ ನಿಲ್ಲಿಸಿ ಚಾಸಾ-1 ರವರು ಇಬ್ಬರು ಪಂಚರನ್ನು

ಕರೆದು ಸದರಿ ಅವರಿಗೆ ಇದ್ದ ವಿಷಯವನ್ನು ತಿಳಿಸಿ ನಮ್ಮ ಜೊತೆಗೆ ಕರೆದುಕೊಂಡು ಬಿ.ಗುಡಿಹಾಳ ಗ್ರಾಮ ಬಸ್ಸ ನಿಲ್ದಾಣದ ಸಮೀಪ ಮರೆಮಾಚಿ ನಿಂತು ನೋಡಿ ಸ್ಪಿರಿಟ್ ಮಾರಾಟ ಮಾಡುವ ಬಗ್ಗೆ ಖಾತರಿಪಡಿಸಿಕೊಂಡು ಅವರನ್ನು ಹಿಡಿಯಲು ಹೋದಾಗ ಸದರಿ ವ್ಯಕ್ತಿಯು ನಮ್ಮನ್ನು ನೋಡಿ ಓಡಿ ಹೋದನು. ಹಾಗೆಯೇ ಸದರಿ ವ್ಯಕ್ತಿಯ ಎದುರುಗಡೆ ನಿಂತಿದ್ದ ಇಬ್ಬರು ವ್ಯಕ್ತಿಗಳು ಸಹ ಓಡಿ ಹೋದರು. ಚಾಸಾ-5 ರವರು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದ್ದು ಸದರಿ ವ್ಯಕ್ತಿಯು ಸಿಗಲಿಲ್ಲ. ನಮ್ಮ ಜೊತೆಗೆ ಇದ್ದ ಪಂಚರನ್ನು ಸದರಿ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ ಪಂಚರು ವ್ಯಕ್ತಿಯ ಹೆಸರು ಒಬ್ಬ ಹಿರೇಹೊನ್ನಿಹಳ್ಳಿ ಗ್ರಾಮದ ಬಸಯ್ಯ ಕಂಬಳಿ ಇನ್ನೊಬ್ಬ ವ್ಯಕ್ತಿಯ ಹೆಸರು ರವಿ ಫಕೀರಪ್ಪ ಭಜಂತ್ರಿ ಸಾಕೀನ ಬಿ.ಗುಡಿಹಾಳ ಗ್ರಾಮ ಎಂದು ಹೇಳಿದರು.

ಸ್ಥಳದಲ್ಲೇ ಬಿಟ್ಟು ಹೋದ ಚೀಲವನ್ನು ಪರಿಶೀಲಿಸಿ ನೋಡಿದಾಗ ಸದರಿ ಚೀಲದಲ್ಲಿ ಅಂದಾಜು 100 ಎಮ್ ಎಲ್ ಕೈಯಿಂದ ಕಟ್ಟಿದ 158 ಸ್ಪಿರಿಟ್ ಪಾಕೇಟಗಳು ಇದ್ದವು. ಸದರಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಮುದ್ದೆಮಾಲು ಮತ್ತು ನಾವು ಠಾಣೆಗೆ ಹೋಗಿ ಚಾಸಾ-1 ರವರು ಚಾಸಾ-8 ರವರಿಗೆ ಆರೋಪಿಯ ವಿರುದ್ಧ ಈ ಪ್ರಕರಣದ ದೂರನ್ನು ಕೊಟ್ಟರು.

ದಿಃ 09.10.2020 ರಂದು 1 ನೇ ಆರೋಪಿಯು ಹಿರೇಹೊನ್ನಿಹಳ್ಳಿ ಗ್ರಾಮದ ಬಸ್ಸ ನಿಲ್ದಾಣದಲ್ಲಿ ನಿಂತಿರುವುದು ಮಾಹಿತಿ ಬಂದಿದ್ದು ಠಾಣೆಗೆ ಕರೆದುಕೊಂಡು ಬಂದು ದಸ್ತಗಿರಿ ಮಾಡಿ ನಂತರ ಸದರಿಯವರ ಸ್ವ ಇಚ್ಚೆ ಹೇಳಿಕೆಯನ್ನು ಚಾಸಾ-8 ರವರು ಪಡೆದುಕೊಂಡರು. ಸದರಿ ವ್ಯಕ್ತಿಯ ಜೊತೆಗೆ ಇದ್ದ ಮತ್ತೊರ್ವ ಆರೋಪಿಯ ಹೆಸರು ರವಿ ಫಕೀರಪ್ಪ ಭಜಂತ್ರಿ ಸಾಕೀನ ಬಿ. ಗುಡಿಹಾಳ ಎಂದು ತಿಳಿಸಿದರು. ಸದರಿ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿದರು.

ದಿಃ 29.12.2020 ರಂದು ಠಾಣೆಗೆ ಹಾಜರಾಗಿ ರವಿ ಫಕೀರಪ್ಪ ಭಜಂತ್ರಿ @ ಕೊರವರ ಸಾಕೀನ ಬಿ. ಗುಡಿಹಾಳ ಸ್ಪಿರಿಟ್ ಮಾರಾಟ ಮಾಡುತ್ತಿದ್ದ ಬಗ್ಗೆ ತನ್ನ ಸ್ವ ಇಚ್ಚೆಯ ಹೇಳಿಕೆಯನ್ನು ಹೇಳಿದನು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 158 ಖಾಲಿ ಚೀಲವನ್ನು ನೋಡಿ ಅದನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು. ಮಾ.1 ಎಂದು ಗುರುತಿಸಲಾಗಿದೆ.

ಆರೋಪಿಗಳು ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಆರೋಪಿತರ ಗುರುತುವಳಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಆರೋಪಿತರನ್ನು ತೋರಿಸಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದ**

ದಿಃ 02.04.2020 ರಂದು ಬಾತ್ಮಿ ಬಂದಾಗ ಸಮಯ ಬೆಳಿಗ್ಗೆ 7.00 ಗಂಟೆ ಆಗಿತ್ತು. ಸಾಕ್ಷಿಯು ಮುಂದುವರೆದು ಅಂದು 03.04.2020 ತಾರೀಖು ಇತ್ತು ಎಂದು ನುಡಿಯುತ್ತಾರೆ. ಪಂಚನಾಮೆ ಮಾಡಿದಾಗ ದಿಃ03.04.2020 ಈ ಪ್ರಕರಣದ ಪಂಚನಾಮೆ ಮಾಡಲಾಯಿತು. ಪಂಚರನ್ನು ಸರಕಾರಿ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ನಾನು ಹಿರೇಹೊನ್ನಿಹಳ್ಳಿ ಗ್ರಾಮದಲ್ಲಿ ಇದ್ದೆ. ಸದರಿ ಪಂಚರಿಗೆ ನೋಟೀಸ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಮಂದುವರೆದು ನಾನು ಪೆಟ್ರೋಲಿಂಗ್ ವಾಹನದ ಒಳಗೆ ಕುಳಿತಿದ್ದ ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ನಾನು ಪೆಟ್ರೋಲಿಂಗ್ ವಾಹನದ ಒಳಗೆ ಇದ್ದಾಗ ಸದರಿ ಸ್ಥಳದಲ್ಲಿ ಚಾಸಾ-1 ರವರು ಇರಲಿಲ್ಲ. ಸಾಕ್ಷಿಯು ಮಂದುವರೆದು ಪಂಚರನ್ನು ಕರೆಯಲು ಚಾಸಾ-1 ರವರು ಹೋಗಿದ್ದರು ಎಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳ ಒಂದು ಸಾರ್ವಜನಿಕ ಸ್ದಳ ಎಂದರೆ ಸರಿ. ಸದರಿ ಸ್ಥಳದಲ್ಲಿ ಸುತ್ತಮುತ್ತಲು ಸಾಕಷ್ಟು ಮನೆಗಳು ಇದ್ದವು ಎಂದರೆ ಸರಿ. ಕೃತ್ಯ ಸ್ದಳವು ಬಸ್ಸ ನಿಲ್ದಾಣ ಇದ್ದ ಕಾರಣ ಸದರಿ ಸ್ಥಳದಲ್ಲಿ ಸಾರ್ವಜನಿಕರು ನಿಂತಿದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಪಂಚರು ನಮ್ಮ ಠಾಣಾ ಸಿಬ್ಬಂದಿ ಎಲ್ಲಿಯು ಕರೆದರು ಸಹ ಸಹಿ ಮಾಡುತ್ತಾರೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ನಿಮಗೂ ಹಾಗೂ ಆರೋಪಿತರಿಗೂ ಎಷ್ಟು ಪ್ರಮಾಣ ಅಂತರವಿತ್ತು ಎಂದರೆ ಸಾಕ್ಷಿಯು ಮೊದಲು ತನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದು ನಂತರ ತಾನು ವ್ಯಕ್ತಿಗಳ ಸಮೀಪ ಹೋದಾಗ ಓಡಿದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಸಾರ್ವಜನಿಕರು ಇದ್ದಿದ್ದು ಸದರಿಯವರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ.

ಮು.ಮಾ1 ರಲ್ಲಿರುವ ಮುದ್ದೆಮಾಲು ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು. ಮಾ 1 ರಲ್ಲಿರುವ ಮುದ್ದೆಮಾಲುಗಳನ್ನು ಸೃಷ್ಟಿಸಿ ಈ ಪ್ರಕರಣಕ್ಕೆ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರ ಸಮಕ್ಷಮ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ದಿಃ 09.10.2020 ರಂದು ಆರೋಪಿತರ ಹೇಳಿಕೆಗಳನ್ನು ಪಡೆದಿದ್ದು ಅದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಅನುಕೂಲವಾಗಲಿ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**